ತಂತಿ ವಿಳಾಸ: ಯೂನಿರಿಜ್
ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301

e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು

ಸಂಖ್ಯೆ:ಜಿಎಲ್5/31/2020-21

ದಿನಾಂಕ 21.04.2021

## ಸುತ್ತೋಲೆ

ವಿಷಯ: ಕೋವಿಡ್-19 (ಕೋರೊನಾ ವೈರಸ್) ನಿಯಂತ್ರಿಸುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳ/ಘಟಕ ಕಾಲೇಜುಗಳನ್ನು ಮತ್ತು ವಿದ್ಯಾರ್ಥಿನಿಲಯಗಳನ್ನು ಸ್ಥಗಿತಗೊಳಸುವ ಬಗ್ಗೆ.

ಉಲ್ಲೇಖ: Vide Order No. RD 158 TNR 2020, Dated: 20.04.2021 of the Chief Secretary and Chariman, State Excutive Committee, Karnataka Government Secretariat, Vidhana Soudha, Bangalore.

* * * * *

ಉಲ್ಲೇಖಿತ ಸರ್ಕಾರದ ಆದೇಶದನ್ವಯ, ತೀವ್ರಗತಿಯಲ್ಲಿ ಹರಡುತ್ತಿರುವ ಕೋವಿಡ್-19 (ಕೋರೊನಾ ವೈರಸ್) ಸಾಂಕ್ರಾಮಿಕ ರೋಗವನ್ನು ನಿಯಂತ್ರಿಸುವ ದೃಷ್ಟಿಯಿಂದ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಟ್ಟ ಅಧ್ಯಯನ ವಿಭಾಗಗಳು ಮತ್ತು ಘಟಕ ಕಾಲೇಜುಗಳ/ಸಂಯೋಜಿತ ಕಾಲೇಜುಗಳಲ್ಲಿನ Offline ತರಗತಿಗಳನ್ನು ಮುಂಜಾಗ್ರತ ಕ್ರಮವಾಗಿ ದಿನಾಂಕ: 21.04.2021 ರಿಂದ 15.05.2021ರವರೆಗೆ ಅಥವಾ ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಲಾಗಿದೆ ಮತ್ತು ಎಲ್ಲಾ ಕಾಲೇಜುಗಳ/ ಅಧ್ಯಯನ ವಿಭಾಗಗಳ / ಗ್ರಂಥಾಲಯದ ಮುಖ್ಯಸ್ಥರುಗಳು ಈ ಕೆಳಗಿನ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸುವಂತೆ ತಿಳಿಸಲು ಮಾನ್ಯ ಕುಲಪತಿಗಳಿಂದ ನಿರ್ದೇಶಿತನಾಗಿದ್ದೇನೆ.

1. ಸ್ನಾತಕೋತ್ತರ ಪದವಿಯ ಮೊದಲನೆ ಚಾತುರ್ಮಾಸದ ಪಠ್ಯಕ್ರಮಗಳನ್ನು ದಿನಾಂಕ: 15.05.2021ರೊಳಗೆ Online ಮೂಲಕ ವೇಳಾಪಟ್ಟಿಯನುಸಾರ ತರಗತಿಗಳನ್ನು ತೆಗೆದುಕೊಂಡು ಪೂರ್ಣಗೊಳಿಸುವುದು. ಈಗಾಗಲೇ ಪ್ರಾರಂಭಗೊಂಡಿರುವ ಸ್ನಾತಕೋತ್ತರ ಪದವಿಯ ನಾಲ್ಕನೇ ಚಾತುರ್ಮಾಸದ ತರಗತಿಗಳನ್ನು ಆನ್‌ಲೈನ್ ಮೂಲಕ ಮುಂದುವರೆಸತಕ್ಕದ್ದು. ಎಲ್ಲಾ ಅಧ್ಯಾಪಕರು ವೇಳಾಪಟ್ಟಿಗನುಗುಣವಾಗಿ, **ಆದ್ಯತೆಯ ಮೇರೆಗೆ** ಆಯಾ ವಿಭಾಗ / ಕಾಲೇಜುಗಳಿಂದಲೇ online ತರಗತಿಗಳನ್ನು ತೆಗೆದುಕೊಳ್ಳತಕ್ಕದ್ದು, ವಿಶೇಷ ಸಂದರ್ಭಗಳಲ್ಲಿ ಅಧ್ಯಾಪಕರುಗಳು ಮನೆಯಿಂದಲೇ online ತರಗತಿಗಳನ್ನು ತೆಗೆದುಕೊಳ್ಳಬೇಕಾದಲ್ಲಿ ಪೂರ್ವಭಾವಿಯಾಗಿ ಕಾಲೇಜು/ವಿಭಾಗಗಳ ಮುಖ್ಯಸ್ಥರಿಂದ ಅನುಮತಿ ಪಡೆಯುವುದು.

2. ವಿದ್ಯಾರ್ಥಿನಿಲಯಗಳಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳು/ಸಂಶೋಧನಾ ವಿದ್ಯಾರ್ಥಿಗಳು ಈ ಸುತ್ತೋಲೆ ಹೊರಡಿಸಿದ 72 ತಾಸುಗಳಲ್ಲಿ ವಸತಿನಿಲಯಗಳನ್ನು ತೆರವುಗೊಳಿಸುವುದು.

3. ರಜಾ ಅವಧಿ ಮುಗಿದ ನಂತರ ಹಾಸ್ಟೆಲ್ ವಿದ್ಯಾರ್ಥಿಗಳು ಕೋವಿಡ್-19 (ಕೊರೋನಾ ವೈರಸ್) ಸೋಂಕು ಇಲ್ಲದಿರುವ ಬಗ್ಗೆ ವೈದ್ಯಕೀಯ ಪ್ರಮಾಣಪತ್ರ (RTPCR Test Result) ವನ್ನು ಸಲ್ಲಿಸತಕ್ಕದ್ದು.

4. ವಿಶ್ವವಿದ್ಯಾನಿಲಯದ ಘಟಕ /ಸಂಯೋಜಿತ ಕಾಲೇಜುಗಳ ಸ್ನಾತಕ ಪದವಿಯ ತರಗತಿಗಳನ್ನು ಈಗಾಗಲೇ ಮುಂದೂಡುವಂತೆ ತಿಳಿಸಲಾಗಿರುವುದರಿಂದ ಈ ಅವಧಿಯಲ್ಲಿ ಆನ್‌ಲೈನ್ ತರಗತಿಗಳನ್ನು ತೆಗೆದುಕೊಳ್ಳಲು ಪೂರ್ವಸಿದ್ಧತೆ ಮಾಡಿಕೊಂಡು 3-5-2021 ರಿಂದ online ತರಗತಿಗಳನ್ನು ತೆಗೆದುಕೊಳ್ಳುವುದು.

Circular

5. ಆಗಾಗ್ಗೆ ಭಾರತ/ ಕರ್ನಾಟಕ ರಾಜ್ಯ ಸರ್ಕಾರ ಅಥವಾ ಜಿಲ್ಲಾಡಳಿತವು ಕೋವಿಡ್-19 ಸಂಬಂಧ ಹೊರಡಿಸುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವುದು.

6. ಕಾಲೇಜು / ಅಧ್ಯಯನ ವಿಭಾಗಗಳಲ್ಲಿ 45 ವರ್ಷಕ್ಕೂ ಮೇಲ್ಪಟ್ಟ ವಯೋಮಾನದ ಎಲ್ಲಾ ಉದ್ಯೋಗಿಗಳು ಕಡ್ಡಾಯವಾಗಿ ಸರ್ಕಾರದ ನಿರ್ದೇಶಾನುಸಾರ ಲಸಿಕೆ ಪಡೆಯುವುದು.

7. ಈ ಅವಧಿಯಲ್ಲಿ ಯಾವುದೇ ಸಭೆ /ಸಮಾರಂಭ/ಕಾರ್ಯಾಗಾರವನ್ನು ನಡೆಸುವಂತಿಲ್ಲ ಉಳಿದಂತೆ, ಉಲ್ಲೇಖಿತ ಆದೇಶದಲ್ಲಿ ಸಂಬಂಧಿಸಿದ ಎಲ್ಲಾ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸತಕ್ಕದ್ದು.

21/04/2021

ಕುಲಸಚಿವ

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಇವರಿಗೆ:
1. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಮಾ.ಗಂ., ಮೈಸೂರು.
2. ಎಲ್ಲಾ ಅಂಗ ಸಂಸ್ಥೆಗಳ ನಿರ್ದೇಶಕರು/ಸಂಯೋಜನಾಧಿಕಾರಿಗಳು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಹಾಸನ/ಮಂಡ್ಯ/ಚಾಮರಾಜನಗರ.
4. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ /ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು, ಮೈವಿವಿ, ಮೈಸೂರು
6. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ಕಛೇರಿ, ಮಾನಸಗಂಗೋತ್ರಿ, ಮೈಸೂರು
7. ಎಲ್ಲಾ ಉಪಕುಲಸಚಿವ/ಸಹಾಯಕ ಕುಲಸಚಿವ/ಅಧೀಕ್ಷಕರು, ಮೈವಿವಿ, ಮೈಸೂರು.
8. ಕುಲಪತಿ /ಕುಲಸಚಿವ /ಕುಲಸಚಿವ (ಪರೀಕ್ಷಾಂಗ) /ಹಣಕಾಸು ಅಧಿಕಾರಿಯವರ ಆಪ್ತ ಸಹಾಯಕರು, ಮೈವಿವಿ, ಮೈಸೂರು.
9. ಕಛೇರಿ ಪ್ರತಿ.

Circular